# ಎಂದೂ ಒಡೆಯದ ಕನ್ನಡಿ

'ವಿಚಾರಲಹರಿ'ಯ ಹಿಂದಣ ನನ್ನ ಅಂಕಣದಲ್ಲಿ 'ಬಾಲ್ಯದ ಬಾಲ್ಯ' ಎಂಬ ಬಗೆಗೆ ಕೆಲವು ವಿಚಾರಗಳನ್ನು ಬರೆದಿದ್ದೆ. ಉಪನಿಷತ್ತಿನ 'ಸತ್ಯಸ್ಯ ಸತ್ಯ' ಎಂಬ ನುಡಿಕಟ್ಟಿಗೆ 'ಬಾಲ್ಯದ ಬಾಲ್ಯ' ಎಂಬ ಪರಿಕಲ್ಪನೆ ಸಂವಾದಿಯಾಗಿದೆ ಎಂದಿದ್ದೆ. ಈ ಕುರಿತು ಇನ್ನಷ್ಟು ವಿಚಾರ ಮಾಡುವುದು ಸಾಧ್ಯ ಎಂದು ಅನ್ನಿಸುತ್ತಿದೆಯಾಗಿ ಈಗಣ ಅರಿಕೆ ಮಾಡುತ್ತಿದ್ದೇನೆ.

ಸತ್ಯದ ಸಾಕ್ಷಾತ್ಕಾರ– ಎಂಬ ಮಾತು ಕೇಳಿದ್ದೇವೆ. ಅದು ಬಾಲ್ಯದ ಸಾಕ್ಷಾತ್ಕಾರವೇ. 'ಸತ್ಯ'ನಮ್ಮೊಳಗೇ ಇದೆ ಮತ್ತು ಸದಾ ಇದೆ ಎಂಬ ಮಾತುಗಳನ್ನೂ ಕೇಳಿದ್ದೇವೆ. ನಮ್ಮೊಳಗೆ ಸದಾ ಇರುವುದು ನಮ್ಮ ಬಾಲ್ಯವೇ. ಆದುದರಿಂದಲೇ ನಮ್ಮ ಬಾಲ್ಯವನ್ನು ಕುರಿತ ಸೆಳೆತ, ಅದೊಂದು ಹಂಬಲ ನಮ್ಮನ್ನು ಸದಾ ಕೆಣಕುತ್ತಿರುವುದು. ನಿತ್ಯ ಬದಲಾಗುತ್ತ ನಡೆಯುತ್ತಿರುವ ಈ ಜಗತ್ತಿನಲ್ಲಿ ಈ ಬದಲಾವಣೆಯ ಜೊತೆಗೆ ಹೆಜ್ಜೆ ಹಾಕುತ್ತಿರುವಾಗಲೂ ಈ ಎಲ್ಲ ಬದಲಾವಣೆಯನ್ನು ಅದೊಂದು ಆತಂಕದ ದೃಷ್ಟಿಯಿಂದ ಗಮನಿಸಲು ಅನುವಾಗುವಂತೆ ಮತ್ತು ಈ ಗಮನಿಸುವಿಕೆಯು ಬದಲಾವಣೆಯ ಅಪ್ರತಿಹತ ವೇಗಕ್ಕೆ ಒಂದು ಕಡಿವಾಣದಂತೆಯೂ ಆಗಿ ವೇಗವನ್ನು ಒಂದಿಷ್ಟು ಜಗ್ಗುವಂತೆ, ನಮ್ಮ ಕಳೆದುಹೋದ ಬಾಲ್ಯದ ಹಂಬಲವು ಕೆಲಸ ಮಾಡುತ್ತದೆ; ಮಾಡುತ್ತಿದೆ. ಕಾಡುತ್ತದೆ; ಕಾಡುತ್ತಿದೆ.

ಬಾಲ್ಯದ ಹಂಬಲವೆಂದರೆ ಇನ್ನೊಮ್ಮೆ ಬಾಲ್ಯವನ್ನು ಅನುಭವಿಸುವ ಹಂಬಲ. ಇನ್ನೊಮ್ಮೆ ಮಗುವಾಗುವ ಹಂಬಲ. ಕಳೆದುಹೋದ ಮುಗ್ಧತೆಯನ್ನು ಮರಳಿ ಪಡೆಯಲಾದೀತೇನೋ ಎನ್ನುವ ಹಂಬಲ. 'ಹಂಬಲ'ವು ಅರ್ಥತಃ 'ಅಹಂ–ಬಲ' ವೇ ಆದರೂ 'ಅಹಂ–ಬಲ'ದಲ್ಲಿ ಇಲ್ಲದ ಆರ್ತತೆಯೊಂದು 'ಹಂಬಲ'ದಲ್ಲಿ ತೋರುತ್ತಿದೆ. ಈ 'ಆರ್ತತೆ'ಯೇ ಬಾಲ್ಯದ ನೆನಪನ್ನು ಉದ್ದೀಪಿಸುತ್ತದೆ!

ಈ ರೀತಿಯ ಹಂಬಲವು ಅದೊಂದು ವಿಧದ 'ರಮ್ಯವಾದ'– 'ರೋಮ್ಯಾಂಟಿಸಿಸಮ್' ಎಂದು ಹೀಗಳೆಯುವವರಿದ್ದಾರೆ. ಬಾಲ್ಯದ ಮುಗ್ಧತೆಯು ಅಪ್ರಜ್ಞಾಪೂರ್ವಕವಾಗಿ ಇದ್ದುದಾಗಿ– ಅಂದರೆ ಅದು ಇದೆ; ಇತ್ತು ಎಂದೇ ಪ್ರಜ್ಞಾಪೂರ್ವಕವಾಗಿ ತಿಳಿದು ಬಂದಿರಲಿಲ್ಲವಾಗಿ, ಇದ್ದುದೇ ತಿಳಿಯದಿದ್ದಾಗ ಅದು ಕಳೆದು ಹೋದುದು ತಿಳಿದುದು ಹೇಗೆ ಎಂದು ಹರಿತವಾದ ತರ್ಕದ ಪ್ರಶ್ನೆಯನ್ನೆತ್ತುವ ತಾರ್ಕಿಕರಿದ್ದಾರೆ.

ಇದಂತೂ ಅನುಭವ ವಿರುದ್ಧವಾದ ಮಾತು. ಬಾಲ್ಯವು ಕಾಡುತ್ತಿರುವುದು ಈ ಲೋಕದಲ್ಲಿ ಸಾರ್ವಜನೀನವಾದ ಅನುಭವವಾಗಿದೆ. ಇದಕ್ಕೆ ಎಲ್ಲೆಡೆಯಿಂದ, ಅನೇಕ ಭಾಷೆಗಳ ಸಾಹಿತ್ಯದಿಂದ ದೃಷ್ಟಾಂತಗಳನ್ನು ಒದಗಿಸಬಹುದು. ಅಥವಾ ಈ ತರ್ಕವನ್ನೇ ಒಪ್ಪಿದರೂ– ಮನುಷ್ಯಜೀವಿಯಲ್ಲಿ ಸದಾ ಇರುವ ಮುಗ್ಧತೆಯು ಅದು ಸದಾ ಇರುವುದರಿಂದಲೇ ಎಂದೂ ಕಳೆದುಹೋಗಿಲ್ಲ, ಆದರೆ ಕಳೆದು ಹೋದಂತೆ ಅನ್ನಿಸುತ್ತಿದೆಯಷ್ಟೇ– ಎಂದಾಗುತ್ತದೆಯಲ್ಲದೆ ಅದು ಇರಲೇ ಇಲ್ಲ ಎಂದಾಗುವುದಿಲ್ಲ. ಇದು ನಾವು ಒಪ್ಪಬಹುದಾದ ಮಾತೇ ಆಗಿದೆ. ಏಕೆಂದರೆ– ಕಳೆದುಹೋದಂತೆ ಅನ್ನಿಸದೆ ಮನಸ್ಸಿಗೆ ಹುಡುಕಾಟದ ಪ್ರವೃತ್ತಿಯೇ ಉಂಟಾಗದು. ಏನನ್ನೋ ಹುಡುಕಾಡುತ್ತಿದ್ದೇವೆ ಎನ್ನುವುದು ಹೌದಾದರೆ, ಯಾವುದೋ ಪರಿಚಿತವಾದುದು ಅಥವಾ ಪರಿಚಿತತೆ– ಅಪರಿಚಿತತೆಗಳ ಗೆರೆಗಳ ನಡುವೆ ಇರುವಂಥದ್ದನ್ನು; ಈಗ ಕಳೆದುಕೊಂಡಿರುವುದನ್ನು ಹುಡುಕಾಡುತ್ತಿದ್ದೇವೆ ಎಂದೇ ಅರ್ಥ.

ಸರ್ವಥಾ ಹೊಸದಾದುದನ್ನು ನಾವು ಎಂದೂ ಊಹಿಸದೆ; ಕಲ್ಪಿಸದೆ; ಭಾವಿಸದೆ; ಅನುಭವಿಸದೆ ಇರುವಂಥದ್ದನ್ನು ಹುಡುಕಾಡುವುದೆಂದರೇನು?

ಹೊಚ್ಚಹೊಸತೊಂದು ಸಿಕ್ಕಿದರೆ ಅದು ಹುಡುಕಾಡಿ ಸಿಕ್ಕಿದ್ದು ಎಂದಾಗುವುದಾದರೂ ಹೇಗೆ?

ಆದುದರಿಂದ ಎಂದೂ ಹಳತಾಗದ 'ಸತ್ಯ' ನಮ್ಮಲ್ಲೇ ಇದೆ.

ಹಳತಾಗುವುದೆಂದರೆ ಬೆಳೆಯುವುದೂ ಆದುದರಿಂದ ಈ ಅರ್ಥದಲ್ಲಿ ಎಂದೂ ಬೆಳೆಯದ– ನಿತ್ಯ ಶೈಶವದ– ಮಗುವೊಂದು ನಮ್ಮೊಳಗೇ ಇದೆ. ಮತ್ತು ಬೆಳೆಯುವುದೆಂದರೆ ಲೋಕ ಸಂಪರ್ಕದಿಂದಾಗಿ ನಮ್ಮ ಸ್ವಾರ್ಥವು ಜಾಗೃತವಾಗಿ ಮುಗ್ಧತೆಯು ಕೆಡುವುದಾದುರಿಂದ, ಬೆಳೆಯದ– ಎಂದರೆ ಎಂದೂ ಕೆಡದ ಮುಗ್ಧತೆಯ ಬಾಲ್ಯವೊಂದು ನಮ್ಮೊಳಗೇ ಇದೆ.

ಈಗ ನಾವು ಕಳೆದುಕೊಂಡತಿರುವ ನಿತ್ಯ ಮುಗ್ಧವಾದ ಬಾಲ್ಯ ನಮಗೆ ಮರಳಿ ದೊರೆತರೆ ಆ ಅನುಭವ ಹೇಗಿರಬಹುದು? ಆಗ ದೊಡ್ಡ ಸೋಜಿಗವೊಂದು ಎದುರಾಗುವುದಂತೆ.

ಅದೇನೆಂದರೆ– ನಮ್ಮ ಎಳವೆಯಲ್ಲಿ ಯಾವ ಭಾಷೆ; ಸಂಸ್ಕೃತಿ; ಜಾತಿ; ಮತ; ಧರ್ಮ ಬದುಕಿನ ರೀತಿ–ನೀತಿಗಳನ್ನೆಲ್ಲ ಇದ್ದುದಿದ್ದಂತೆ

ಅನಾಯಾಸವಾಗಿ ಕಲಿಕೆ ಎಂದೇ ತಿಳಿಯದೆ ನಾವು ಕಲಿತುಬಿಟ್ಟೆವಲ್ಲ, ಹೀಗೆ ಹುಟ್ಟ ಬೆಳೆದ ಪರಿಸರವನ್ನೆ ಇಡಿಯಾಗಿ ಪಡಿಮೂಡಿಸಬಲ್ಲ– ಪ್ರತಿಫಲನ ಮಾಡಬಲ್ಲ ಬಾಲ್ಯದ ನಮ್ಮ ಸಾಮರ್ಥ್ಯ, ಕನ್ನಡಿಯಂಥ ನಮ್ಮ ವ್ಯಕ್ತಿತ್ವದಿಂದ ಬಂದುದು ಎಂದು ಅರಿವಿಗೆ ಬರುವುದಂತೆ!

ನಿಜಕ್ಕೂ ನಮ್ಮ ಜೀವವೊಂದು ಕನ್ನಡಿ!

ಯಾವುದನ್ನು ನೋಡುವೆವೋ ಅದನ್ನು ಪ್ರತಿಫಲನ ಮಾಡುವೆವು!

ಕನ್ನಡಿಗೆ ಆಯ್ಕೆಗಳಿಲ್ಲ . ಆಯ್ಕೆಗಳಿಲ್ಲದಿರುವುದೇ ನಿಜವಾದ ಮುಗ್ಧತೆ!

ಸಮಸ್ಯೆ ಎಂದರೆ ನಾವು ಯಾವ ಪರಿಸರದಲ್ಲಿ ಹುಟ್ಟುವೆವೋ ಆ ಪರಿಸರವನ್ನು ಪ್ರತಿಫಲನ ಮಾಡುವೆವು. ಮತ್ತು ಪ್ರತಿಫಲನವನ್ನು ನಿಜ ಎಂದು ನಂಬುವೆವು. ನಮ್ಮ ಕನ್ನಡಿತನವನ್ನು ಮರೆಯುವೆವು. ಅಲ್ಲಿಗೆ ಕನ್ನಡಿ ಮಸುಕಾಗುವುದು.

ಒಮ್ಮೆ ಪ್ರತಿಫಲನವೇ 'ನಿಜ'ವೆನಿಸಿದಾಗ ಅದು ಕನ್ನಡಿಯ ಆಯ್ಕೆಯಂತಾಗುವುದು. ಅಲ್ಲಿಗೆ ಎಲ್ಲವನ್ನೂ ಪ್ರತಿಫಲನ ಮಾಡಬಲ್ಲ ಕನ್ನಡಿಯ ಪಾರದರ್ಶಕತೆ ಅಳಿದು ಅದು ತನ್ನ ಆಯ್ಕೆಯಲ್ಲಿ ತಾನೇ ಬಂಧಿಯಾಗುವುದು. ಇದು ಮುಗ್ಧತೆಯ ಕೇಡು! ಇನ್ನೊಮ್ಮೆ ಬಾಲ್ಯವನ್ನು ಪಡೆಯುವುದೆಂದರೆ– ಇನ್ನೊಮ್ಮೆ ತಾನು ಕನ್ನಡಿ ಎಂದು ಅರಿತಂತೆ! ಎಲ್ಲ ಆಯ್ಕೆಗಳನ್ನೂ ಅವುಗಳನ್ನು ಕೆಡಿಸದೆ ಮೀರಿದಂತೆ!

■ **ತೋಷ**

## ಮಾತೇ ಮುತ್ತು

★ ತಪ್ಪುಗಳನ್ನು ಮಾಡುತ್ತಾ ಸಾಗಿಸಿದ ಜೀವನವು ಏನನ್ನೂ ಮಾಡದೆ ಸವೆಸಿದ ಜೀವನಕ್ಕಿಂತ ಹೆಚ್ಚು ಗೌರವಾರ್ಹವೂ ಉಪಯುಕ್ತವೂ ಆಗಿದೆ.

–ಜಾರ್ಜ್ ಬರ್ನಾರ್ಡ್ ಷಾ

★ ಮುಂದಿನ ಕ್ಷಣದಲ್ಲಿ ಏನಾಗುತ್ತದೋ ಗೊತ್ತಿಲ್ಲ. ಆದರೆ ನಾವು ಮುನ್ನಡೆಯಲೇಬೇಕು. ಏಕೆಂದರೆ ನಮಗೆ ನಂಬಿಕೆಯಿದೆ, ಶ್ರದ್ಧೆಯಿದೆ.

–ಪಾವ್ಲೊ ಕೊಎಲ್ಹೊ

★ ಸ್ವಲ್ಪ ವಿನಯವಂತರಾಗಿರೋಣ. ನಮಗೆ ಗೊತ್ತಿರುವುದು ಪೂರ್ಣ ಸತ್ಯವಾಗಿರಲಿಕ್ಕಿಲ್ಲ ಎನ್ನುವ ಅನುಮಾನವನ್ನೂ ಇಟ್ಟುಕೊಳ್ಳೋಣ.

–ಜವಾಹರಲಾಲ್ ನೆಹರು

★ ನಿಮ್ಮ ವಯಸ್ಸನ್ನು ಎಷ್ಟು ಗೆಳೆಯರಿದ್ದಾರೆ ಎನ್ನವುದರ ಮೂಲಕ ಅಳೆಯಿರಿ, ವರ್ಷಗಳ ಮೂಲಕ ಅಲ್ಲ. ಜೀವನವನ್ನು ಮುಗುಳ್ನಗುವಿನ ಮೂಲಕ ಅಳೆಯಿರಿ, ಕಣ್ಣೀರಿನ ಮೂಲಕ ಅಲ್ಲ.

–ಜಾನ್ ಲೆನನ್

★ ತಾಯಿಯ ಪದತಲದಲ್ಲಿ ಸ್ವರ್ಗವಿದೆ.

–ಮುಹಮ್ಮದ್ ಪೈಗಂಬರ್

★ ಸಂತೋಷದಿಂದ ಗುಣಪಡಿಸಲಾಗದ ರೋಗವನ್ನು ಬೇರೆ ಯಾವ ಔಷಧದಿಂದಲೂ ಗುಣ ಪಡಿಸಲು ಆಗದು.

–ಗ್ಯಾಬ್ರಿಯಲ್ ಮಾರ್ಕ್ವೆಜ್

★ ಸಂತೋಷದ ಗುಟ್ಟು ಸ್ವಾತಂತ್ರ್ಯ; ಸ್ವಾತಂತ್ರ್ಯದ ಗುಟ್ಟು ಧೈರ್ಯ.

–ಕ್ಯಾರಿ ಜೋನ್ಸ್

★ ನಗು ಇಲ್ಲದಿದ್ದರೆ ಆ ಇಡೀ ದಿನ ವ್ಯರ್ಥವಾದಂತೆ.

–ಚಾರ್ಲಿ ಚಾಪ್ಲಿನ್

★ ಸಂತೋಷವಾಗಿ ಇರುವವನು ಇತರರನ್ನೂ ಸಂತೋಷವಾಗಿ ಇರಿಸಬಲ್ಲ.

–ಆ್ಯನ್ ಫ್ರಾಂಕ್

★ ಪುರುಷನೊಬ್ಬ ಕಲಿತರೆ ಆತನೊಬ್ಬನೇ ಕಲಿತಂತೆ. ಮಹಿಳೆಯೊಬ್ಬಳು ಕಲಿತರೆ ಇಡೀ ಪೀಳಿಗೆಯೇ ಕಲಿತಂತೆ.

–ಬ್ರಿಗಾಮ್ ಯಂಗ್